(ಇಂದು ದಿಃ 20-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
ಮುಂದುವರೆದ ಪಾಟೀ ಸವಾಲು **:- ಶ್ರೀ.VJM** ವಕೀಲರಿಂದ **:-**

ದಾವಾ ಐಟಂ ನಂಬರ 5 ರಿಂದ 11 ಹಿರಿಯರ ಜಮೀನುಗಳು ಅಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ರೈಲ್ವೇ ಇಲಾಖೆಯವರು ಜಮೀನು ಸ್ವಾಧಿನ ಪಡಿಸಿಕೊಂಡು ಪರಿಹಾರ ನೀಡಿದ್ದರು ಸದರಿ ಹಣದಿಂದ ದಾವಾ ಐಟಂ ನಂಬರ 5 ರಿಂದ 11 ನ್ನು ಖರೀದಿ ಮಾಡಲಾಗಿದೆ ಎಂದು ಹೇಳುತ್ತಾರೆ. ಸರ್ವೆ ನಂ. 691 ರ ಜಮೀನನ್ನು ನನ್ನ ತಾಯಿ ಹೆಸರಿಗೆ 1982 ರಲ್ಲಿ ಖರೀದಿ ಮಾಡಿದ್ದಾರೆ. ಸರ್ವೆ ನಂ. 799 ನ್ನು ನನ್ನ ಅಣ್ಣ ಶಿವರಾಜನ ಹೆಸರಿನಲ್ಲಿ 1988 ರಲ್ಲಿ ಖರೀದಿ ಮಾಡಿದ್ದಾರೆ. ರೈಲ್ವೇ ಇಲಾಖೆಯಿಂದ ಬಂದ ಪರಿಹಾರದ ಹಣದಿಂದ ಸರ್ವೆ ನಂಬರ 691 ಮತ್ತು

799 ನ್ನು ಖರೀದಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳನ್ನು ನನ್ನ ಅಣ್ಣ 3 ನೇ ಪ್ರತಿವಾದಿ ತನ್ನ ಸ್ವಂತ ಸಂಪಾದನೆಯಿಂದ ಖರೀದಿ ಮಾಡಿದ ಸ್ವತ್ತುಗಳು ಎಂದರೆ ಸರಿಯಲ್ಲ. ಸರ್ವೆ ನಂ. 8 ರಲ್ಲಿ ಪ್ಲಾಟ ಮಾಡಿದ್ದಾರೆ. 1 ನೇ ಪ್ಲಾಟನ್ನು ಯಾವ ವರ್ಷ ಮಾರಾಟ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನನಗೆ 1 ನೇ ಪ್ರತಿವಾ ಮತ್ತು ಅವರ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಈಗಾಗಲೆ ವಿಭಾಗ ಆಗಿರುವುದರಿಂದ ನನಗೆ ಯಾವುದೇ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. ಪ್ಲಾಟಗಳ ಬೆಲೆ ಹೆಚ್ಚಾಗಿರುವ ಕಾರಣ ಹೇಗಾದರೂ ಮಾಡಿ ಪ್ರತಿವಾದಿಯರಿಂದ ಹಣ ಪಡಯಬೇಕೆಂಬ ದುರಾಷೆಯಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(15 ಮತ್ತು 17 ನೇ ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸದೆ ಇರುವ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.